| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

LX – 2025

| ವಿಷಯ ಸಂಕೇತ Subject Code | 16 |
|---|---|

# ಐಚ್ಛಿಕ ಕನ್ನಡ / OPTIONAL KANNADA

| ಸಮಯ: 3 ಗಂಟೆ 00 ನಿಮಿಷಗಳು | (ಒಟ್ಟು ಪ್ರಶ್ನೆಗಳ ಸಂಖ್ಯೆ : 48) | ಗರಿಷ್ಠ ಅಂಕಗಳು: 80 |
|---|---|---|
| Time : 3 Hours 00 Minutes] | [Total No. of Questions : 48] | [Max. Marks : 80 |

**ಸೂಚನೆ :**

1. **ವಿಭಾಗ 'ಅ'** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

**ಅ–ವಿಭಾಗ**

I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. **(5 × 1 = 5)**

1) ಇಂದ್ರನಿಂದ ಪ್ರತಿನಿತ್ಯ ಮೆಚ್ಚುಗೆ ಪಡೆಯುತ್ತಿದ್ದವರು.

ಅ. ಆದಿದೇವ

ಆ. ಅರ್ಜುನ

ಇ. ನೀಲಾಂಜನೆ

ಈ. ಹರಿಕಾಂತ

2) ಅರ್ಜುನನು ತನ್ನ ಚಿಂತೆ ಎಂಬ ಕೆಸರನ್ನು ತೊಳೆದುದು.

ಅ. ಗಂಗಾಜಲದಿಂದ

ಆ. ವಿವೇಕಜಲದಿಂದ

ಇ. ಬೆವರ ಹನಿಯಿಂದ

ಈ. ಕಣ್ಣೀರಿನಿಂದ

16

3) ಹಿಟ್ಟು ಚೆಲ್ಲಿದಂತ ಬೆಳಕು ಹರಡಿದ್ದು.

ಅ. ಚಂದ್ರನಿಂದ

ಆ. ಹಾಲಿನಿಂದ

ಇ. ಹಿಟ್ಟಿನಿಂದ

ಈ. ಸೂರ್ಯನಿಂದ

4) ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ? ಎಂದವರು.

ಅ. ಭಿಕ್ಷುಕ

ಆ. ಶಿವ

ಇ. ಜಲಗಾರ

ಈ. ರೈತ

5) ಗಯಾ ಪೂರಿ ಕಾಶಿಯಾತ್ರೆ ಜಾತ್ರೆ ನಾನೊಂದನೊಲ್ಲೆ ನೀನೆ ಎಲ್ಲ ದೇವ – ಈ ಹೇಳಿಕೆಗೆ ಸಂಬಂಧಿಸಿದಂತೆ ಜಲಗಾರನ ನಿಲುವು.

ಅ. ದೇವರು ಗುಡಿಯಲ್ಲಿರುವುದರಿಂದ ಜೋಯಿಸರು ಒಳಗೆ ಸೇರಿಸುವುದಿಲ್ಲ.

ಆ. ನಾನು ಬಡವ. ಅಲ್ಲಿಗೆ ಹೋಗಲು ಸಾಧ್ಯವಿಲ್ಲ.

ಇ. ತನ್ನ ಕಾಯಕದ ಮೂಲಕ ದೇವರನ್ನು ಕಂಡುಕೊಳ್ಳಬಹುದು.

ಈ. ಅಲ್ಲಿಗೆ ಹೋಗಲು ಮಾರ್ಗ ಗೊತ್ತಿಲ್ಲ.

II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿಮಾಡಿ. **(5 × 1 = 5)**

6) 'ಸೋಮಧರ' ಪದದ ಅರ್ಥ __________

7) 'ಮತ್ಸರ' ಪದದ ತದ್ಭವ ರೂಪ __________

8) ‘ದ್ವಿರುಕ್ತಿ’ ಗೆ ಇದು ಉದಾಹರಣೆ __________

9) ‘ಆಧಾರ’ ಪದದ ವಿರುದ್ಧಾರ್ಥಕ ಪದ __________

10) ‘ಸುರರೋಲಗ’ ಪದದ ಬಿಡಿಸಿ ಬರೆದ ರೂಪ __________

(ಓಡೋಡಿ, ನಿರಾಧಾರ, ಸುರರ + ಓಲಗ, ಮಚ್ಚರ, ಚಂದ್ರ, ಶಿವ)

III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ: **(1 × 5 = 5)**

11) ಕ) ನೀರು – ಅರಣ್ಯ, ಪೀಡಿಸು

ಚ) ಮಸಣ – ಕುಗ್ಗು

ಟ) ಕಾಡು – ದಡ್ಡ

ತ) ಹಿಗ್ಗು – ಸ್ಮಶಾನ

ಪ) ಗಾವಿಲ – ಸಲಿಲ, ಜಲ,

– ವಿದ್ವಾಂಸ

IV. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ:– **(5 × 1 = 5)**

12) ಪರಮ ತತ್ವಜ್ಞಾನ ಯಾರಿಗೆ ಇಲ್ಲ ?

13) ಚಂದನ ಕರಗಿಸಲು ಏನಾಗುತ್ತದೆ?

14) ನಾಡ ನರಿ ಯಾರು?

15) ಜನಕೆ ಯಾವುದರ ಮಂಕು ಬಡಿದಿದೆ?

16) ಜಗದ ಪಾಪವ ನುಂಗುವವನಾರು?

## ಆ–ವಿಭಾಗ

V. ಕೆಳಗಿನ ಪ್ರಶ್ನೆಗಳಲ್ಲಿ **ನಾಲ್ಕಕ್ಕೆ ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(4 × 2 = 8)**

17) ಸಂಗೀತ ಪ್ರಪಂಚಕ್ಕೆ ಯಾವ–ಯಾವ ವಂಶದ ರಾಜರು ಹಾಜರಿದ್ದರು?

18) ಮರಳ ಲಿಂಗವನ್ನು ಅರ್ಜುನನು ಹೇಗೆ ಪೂಜಿಸಿದನು?

19) ಗುಂಡಯ್ಯನನ್ನು ಶಿವನು ಹೇಗೆ ಕೊಂಡಾಡಿದನು?

20) ಮಾಯೆಗೆ ಪರಮತತ್ವಜ್ಞಾನವಿಲ್ಲ ಎಂಬುದಕ್ಕೆ ಅಲ್ಲಮ ಕೊಡುವ ಉದಾಹರಣೆಗಳೇನು?

21) ಉದ್ದರಿಯ ಕೊಟ್ಟವನು ಏನೇನಾದನು?

VI. ಕೆಳಗಿನ **ನಾಲ್ಕು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4 × 3 = 12)**

22) ಸುರಕಾಮಿನಿ ರಂಗದೊಳ್ ಅದೃಶ್ಯಮಪ್ಪುದು.

23) ಒರ್ವನೆ ನಿಂದು ಕಾದಿದಯ್.

24) ಮೃದುನುಡಿಯಿಂ ಲೋಕಪೂಜ್ಯತೆ.

25) ಜಗಕೊಬ್ಬಳ್ಳೆಸೆ ಸರ್ವಜ್ಞ.

26) ಕುವರಿಯಾದಡೆ ಕುಂದೇನು.

VII. ಕೆಳಗಿನ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2 × 4 = 8)**

27) ಆದಿದೇವನ ವೈರಾಗ್ಯದ ಹಿನ್ನೆಲೆಯನ್ನು ಚರ್ಚಿಸಿ.

28) ‘ಕಾಯಕವೇ ಪೂಜೆ’ – ಎಂಬ ಮಾತು ಗುಂಡಯ್ಯನ ರಗಳೆಯಲ್ಲಿ ಹೇಗೆ ವ್ಯಕ್ತವಾಗಿದೆ?

29) ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ? ವಿವರಿಸಿ.

30) ಚಿಕ್ಕುಪಾಧ್ಯಾಯ ನಿರೂಪಿಸಿರುವ ದೈವ ಹಾಗೂ ವಿಶ್ವಾಸದ ಪರಿಕಲ್ಪನೆಗಳ ಬಗ್ಗೆ ವಿವರಿಸಿರಿ.

VIII. ಕೆಳಗಿನ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ವಿವರಿಸಿ. **(1 × 4 = 4)**

31) ಪರಮಶಿವಾಗಮೋಕ್ತವಿಧಿಯಿಂ ಮಣಲಿಂ
ನೆಗೆಪ್ದೊಂದು ಲಿಂಗಮಂ
ನಿರುಪಮ ಭಕ್ತಿಯಿಂ ತಿಟಿದು ಪಡ್ಡಳಿ
ಬಂದುಗೆ ಕಕ್ಕೆ ಮುತ್ತ ಪಾ
ದರಿಗಳ ಪೂಗಳಂ ಮೃದುಳ ಬಿಲ್ವದಳಂಗಳನಲ್ಲಿ ತಂದು ಶಂ
ಕರನನೊಟಲ್ದು ಪೂಜಿಸಿದನರ್ಥಿತ ವೈರಿ ಜಯಂ ಧನಂಜಯಂ

32) ಎಳೆಜವ್ವನ ಮೊದಲಿಂದುವರೆಗಮೆನ್ನ
ಬಳಿಸಂದು ಬಾಳಿದಳೆಂದು
ಇಳಿವ ಜವ್ವನದೊಳಗೆರವುದೋರದೆಯೆಂದಿ
ನೊಳು ನೇಹವನೊಡರಿಪುದು

### ಇ–ವಿಭಾಗ

IX. ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(1 × 2 = 2)**

33) ಬೆಕ್ಕಿನ ಸ್ವರವನ್ನು ಆಲಿಸಿದವರು ಯಾರು?

34) ಸೀರೆಯವನು ಯಾವ–ಯಾವ ಬಣ್ಣದ ಸೀರೆಗಳನ್ನು ತಂದಿದ್ದನು?

X. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

35) ನಾಗಿಯಕಥೆ – ಕವನದಲ್ಲಿಯ ಪ್ರಕೃತಿ ವರ್ಣನೆ ಕುರಿತು ಬರೆಯಿರಿ.

36) ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ದುರಂತ ಕಥೆಯೇ? ಚರ್ಚಿಸಿ.

## ಈ–ವಿಭಾಗ

XI. ಕೆಳಗಿನ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(2 × 2 = 4)**

37) ಮೂಡಣ ಮತ್ತು ಪಡುವಣದಲ್ಲಿ ಯಾರ‍್ಯಾರಿದ್ದಾರೆ?

38) ಭಾರತಾಂಬೆಯ ದುರ್ಗತಿಗೆ ಕಾರಣಗಳೇನು?

39) ಶಿವನಿಗೆ ಯಾರು ಸಮಾನರಾಗುತ್ತಾರೆ?

XII. ಕೆಳಗಿನವುಗಳಲ್ಲಿ **ಎರಡು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2 × 3 = 6)**

40) ಹುಟ್ಟುಗುಣ ಸುಟ್ಟರೂ ಹೋಗುವುದೆ?

41) ಒಂದು ದಿನವಾದರೂ ವಿಶ್ರಾಂತಿ ಇರಲಿ.

42) ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ.

XIII. ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

43) ಶಿವ ಎಲ್ಲಿದ್ದಾನೆ ಎಂದು ಜಲಗಾರ ಹೇಳುತ್ತಾನೆ? ವಿವರಿಸಿ.

44) ಜಲಗಾರ ನಾಟಕದಲ್ಲಿ ವೈಚಾರಿಕ ಮನೋಧರ್ಮ ಹೇಗೆ ಮೂಡಿ ಬಂದಿದೆ? ಚರ್ಚಿಸಿ.

## ಉ–ವಿಭಾಗ

XIV. ಕೆಳಗಿನ **ಒಂದು** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **(1 × 4 = 4)**

45) ರಸಭಾವಾಭಿನಯಂಗಳ್
ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ
ಪೊಸವೆ ಕರಣಂಗಳುಂ ನಿ
ಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ

46) ಒಂದು ಬೀಜವ ಬಿತ್ತಿ ಮೇಣ್ ಮ
ತ್ತೊಂದು ಫಲವನು ಬಯಸಿ ಬಾತೊಡೆ
ಬಂದುದುಂಟೇ ತನಗೆ ದಿಟವೀ ಮಾಯೆ ಮರುಳಾಗಿ
ಮುಂದುಗಾಣದೆ ಮದದ ತಾಮಸ
ದಿಂದೆ ಸಂಚಲಭಕ್ತಿ ಭರದಲಿ
ಬಂದುದುಂಟೇ ಸಂಫಲಂಗಳು ವಿಮಳೆ ಕೇಳೆಂದ

XV. ಕೆಳಗಿನವುಗಳಲ್ಲಿ **ಒಂದಕ್ಕೆ** ಅಲಂಕಾರ ಹೆಸರಿಸಿ, ಸಮನ್ವಯಗೊಳಿಸಿ. **(1 × 4 = 4)**

47) ಮೃದುನುಡಿ ಮನುಜರ ಹೃದಯಾಕರುಷಣ

ಮೃದುನುಡಿ ಇಹಪರ ಸೌಖ್ಯ

ಮೃದುನುಡಿಯಿಂ ಲೋಕಪೂಜ್ಯತೆ ರಂಗೇಶ

ಮೃದು ನುಡಿಗೆಣೆಯದಿನ್ನುಂಟೆ

48) ನೀಲಾಂಜನೆಯು ಮನ್ಮಥನ ಹೂ ಬಾಣದಂತೆ

ರಂಗಮಂಟಪವನ್ನು ಪ್ರವೇಶ ಮಾಡಿದಳು.